ಎಂದಿದ್ದುದು ಶಾಲೆಯಲ್ಲಿ ಕನ್ನಮರಿ ಎಂದಾಗಿ ಊರುಕೇರಿಯಿಲ್ಲದೆ ದಾಖಲಾಯಿತು.

***

ಫೀಸು ಕಟ್ಟುವಲ್ಲಿ ಸಿಕ್ಕಿದ ಹುಡುಗಿ ಆಮೇಲೆ ನಿನ್ನ ಹೆಸರೇನು ಎಂದು ಕೇಳಿದ್ದಳು. 'ಕನ್ನಮರಿ' ಎಂದೆ. ಅವಳು ಕಣ್ಣು ಅರಳಿಸಿ ಹುಬ್ಬು ಕೊಂಕು ಮಾಡಿ, 'ಹ್ಹಾ ಅಂಗಂದ್ರೆ' ಅಂದಿದ್ದಳು. ತನ್ನ ಹೆಸರನ್ನು ಚಂಪಕಾ ಒಡೆಯರ್ ಎಂದು ಹೇಳಿಕೊಂಡಳು. ಆಮೇಲೆ ಮತ್ತೊಂದು ರಿಕ್ಷಾ ಮಾಡಿಕೊಂಡು ಅದರಲ್ಲಿ ತನ್ನೆಲ್ಲ ಲಗೇಜು ತುಂಬಿಕೊಂಡು, 'ನೀನು ಎಲ್ಲಿಗೆ' ಎಂದಳು. ನಾನೂ ಯೂನಿವರ್ಸಿಟಿಯಲ್ಲಿ ಡಿಪಾರ್ಟ್‌ಮೆಂಟಿಗೆ, ಫೀಸು ಕಟ್ಟಿದ ರಸೀತಿ ಕೊಟ್ಟು ಹೆಸರು ದಾಖಲಿಸಬೇಕಲ್ಲ ಅಂದೆ. 'ಹಾಗಾದರೆ ಬಾ' ಅಂದಳು. ದಾರಿಯಲ್ಲಿ ಹೋಗುತ್ತ, 'ನಾನು ಸದ್ಯಕ್ಕೆ ಹಾಸ್ಟೆಲಿನಲ್ಲಿ ಇದಿಷ್ಟು ಲಗೇಜು ಇಳಿಸಿ, ಇವತ್ತೇ ಬಳ್ಳಾರಿಗೆ ಹೋಗುತ್ತೇನೆ. ಒಂದೇ ಸರ್ತಿ ಉಳಿದ ಲಗೇಜಿನೊಂದಿಗೆ ಮುಂದಿನ ವಾರ ಬರುತ್ತೇನೆ, ಇನ್ನೇನು ಕ್ಲಾಸು ಶುರುವಾಗುತ್ತಲ್ಲ, ನೀನೇನು ಮಾಡುತ್ತೀಯ' ಅಂದಳು. 'ಅದೇ ನಾನು ಊರಿಗೆ ಹೋಗುವೆ, ನೀನು ಬರುವ ದಿನ ಹೇಳು, ಬೇಕಾದರೆ ಬರುತ್ತೇನೆ' ಎಂದೆ. ಅವಳು ಊರಿಗೆ ವಾಪಸು ಹೋಗುತ್ತ ಟ್ರೈನು ಹತ್ತುವಲ್ಲಿ, 'ನಿನ್ನ ಕನ್ನಮರಿ ಹೆಸರು ಚೆನ್ನಾಗಿಲ್ಲ' ಅಂದಳು.

'ಹಾಗಾದರೆ ಕರಡಿಮರಿ ಎಂದು ಕರೆಯಬಹುದು, ನೋಡಲು ಕರಡಿಯಂತೆ ಇದ್ದೇನಲ್ಲ, ಅದು ಹೊಂದಿಕೊಳ್ಳುತ್ತದೆ' ಅಂದೆ.

ಅವಳಿಗೆ ನನ್ನ ತಮಾಷೆಯ ಮಾತು ಹಿಡಿಸಿತು. ತಂದೆ, ತಾತನಂತೆಯೇ ಇದ್ದ ನನ್ನ ಯೌವನದ ಬಲಾಢ್ಯ ದೇಹ ನೋಡಿ, 'ಇಲ್ಲ ಇಲ್ಲ ನೀನು ಕರಡಿಮರಿಯಂತಿಲ್ಲ, ಆನೆಮರಿ' ಅಂದು ರೈಲು ಹತ್ತಿದಳು.

ನಾನು ಚಂಪಕಾಳಿಗೆ ಹೇಳಿದಂತೆ ಊರಿಗೆ ಹೋಗಲೇ ಇಲ್ಲ. ನನಗೆ ಅಲ್ಲಿಂದ ತರುವಂಥ ಲಗೇಜೇನೂ ಇರಲೇ ಇಲ್ಲ. ಎರಡು ವರ್ಷದ ಮೊದಲು ಬರುವಾಗಲೇ ಏನೂ ತಂದಿರಲಿಲ್ಲ. ನನ್ನ ಜೋಳಿಗೆ ಥರದ ಬ್ಯಾಗಿನಲ್ಲಿ ಈಗ ಮೈಮೇಲೆ ಹಾಕಿರುವುದನ್ನು ಬಿಟ್ಟು ಮತ್ತೊಂದು ಪ್ಯಾಂಟು ಷರಟು, ಸಣ್ಣ ಸೋಪು, ಪೇಸ್ಟು ಬ್ರಷ್ಷು,



ಮತ್ತೊಂದು ಹಳೆಯ ವಲ್ಲಿ ಇತ್ತು.

ಮುಂದಿನ ವಾರ ತರಗತಿಯೂ, ಹಾಸ್ಟೆಲೂ ಓಪನ್ ಆಗುವವರೆಗೆ ನಡೆದುಕೊಂಡೇ ಸಿಟಿಯೆಲ್ಲ ಸುತ್ತಿದೆ. ಆ ಮಧ್ಯೆ ಹಾಸ್ಟೆಲಿನ ವಾರ್ಡನ್ನನ್ನು ಕಂಡು ಕೈ ಮುಗಿದು, ಊರಿಂದ ಬಂದುಬಿಟ್ಟಿದ್ದೇನೆ, ಊಟ ಮುಂದಿನ ವಾರವಾದರೂ ಸರಿ, ರಾತ್ರಿ ಮಲಗುವುದಕ್ಕೆ ಜಾಗ ಕೊಡಿ ಅಂದೆ. ಅವರು, 'ಅದೆಲ್ಲ ಆಗುವುದಿಲ್ಲ, ಇಲ್ಲಿ ಎಲ್ಲ ನಿನ್ನಂಥವರೇ ಬರುವುದು. ಧರ್ಮಛತ್ರಕ್ಕೆ ಅನ್ನುವಂತೆ ಬರಿಗೈಲೇ ಬರುವುದು. ಕಾಲು ಊರಲು ಜಾಗ ಕೊಡಿ, ಆಮೇಲೆ ಊಟ ಹಾಕಿ ಅನ್ನುತ್ತಾರೆ. ಎಷ್ಟು ವರ್ಷವಾದರೂ ಗತಿ ಕಾಣದೆ ಕಂಡ ಕಂಡ ಕೋರ್ಸು ಮಾಡುತ್ತ ಊರತ್ತ ತಲೆ ಹಾಕುವುದಿಲ್ಲ. ಇಲ್ಲೇ ಗುಂಪು ಕಟ್ಟಿ ಬೆಂಕಿ, ಹೊಗೆ ಎಬ್ಬಿಸಿಕೊಂಡು ಅಂಡಲೆಯುತ್ತಾರೆ. ನಿಮ್ಮ ಪಂಚಾಂಗವೆಲ್ಲ ಗೊತ್ತು. ಯೂನಿವರ್ಸಿಟಿಯವರು ಸ್ಟ್ರಿಕ್ಟಾಗಿ ಹೇಳಿಬಿಟ್ಟಿದ್ದಾರೆ, ಯಾವತ್ತು ಕ್ಲಾಸೋ ಆವತ್ತೇ ಬಾ' ಅಂದುಬಿಟ್ಟರು. ಹಾಗಾಗಿ, ನಾನು ಯಾವತ್ತೂ ಊರಿನಿಂದ ಬಂದು ಬಸ್ಸು ಇಳಿಯುವಲ್ಲಿ ನೋಡಿದ ಬಸ್‌ಸ್ಟಾಂಡು ದೊಡ್ಡ ಅರಮನೆಯಂತೆ ಕಂಡು, ರಾತ್ರಿಯ ಮೊಕ್ಕಾಮಿಗೆ ಅದೇ ಸರಿಯಾದ ಜಾಗ ಎಂದು ಯೋಚಿಸಿದೆ.

ಅಯ್ಯಂಗಾರ್ ಬೇಕರಿಯಲ್ಲಿ ಸಂಜೆ ತಿಂಡಿ ಬೇಯುವ ಸುವಾಸನೆ ಸೇವಿಸುತ್ತಾ, ನೋಟಿನ ಕಂತೆ ಹಿಡಿದು ಬರುವ ಗ್ರಾಹಕರಿಗೆ ಬ್ರೆಡ್ಡು, ಬಿಸ್ಕತ್ತು ಪೊಟ್ಟಣ ಸುತ್ತಿ ಕೊಡುತ್ತ ಅನ್ನದ ಕಾಸು ಹುಟ್ಟಿಸಿದೆ. ಬಸ್ ಸ್ಟಾಂಡಿನಲ್ಲಿ ಮಲಗಿ, ಚಂಪಕಾಳ ರೈಲು ಬರುವ ದಿನ ಬೆಳಗ್ಗೆ ಮೂರು ಗಂಟೆ ಮುಂಚಿತವಾಗಿಯೇ ಹೋಗಿ ಸ್ಟೇಷನ್ನಿನಲ್ಲಿ ಕಾಯುತ್ತ ಕೂತೆ. ಹಾಗೆ ಅಲ್ಲಿ ಕೂರುವುದು, ಅವಳು ರೈಲು ಇಳಿದು ಬರುವುದು ಬಹಳ ಸಂತೋಷದ, ನಿರೀಕ್ಷೆಯ ಘಳಿಗೆಗಳೆನಿಸಿದವು. ಎಷ್ಟು ಜನ ರೈಲಿನಿಂದ ಇಳಿದರೂ ಬರುವಲ್ಲಿ ಅವಳು ಕಣ್ಣಿಗೆ ಬೀಳಲೇಬೇಕು, ಅಂಥ ಜಾಗದಲ್ಲಿ ನಿಂತೆ. ಹೆಗಲಲ್ಲಿ ಇಳಿಬಿದ್ದ ಬಣ್ಣಬಣ್ಣದ ವ್ಯಾನಿಟಿ ಬ್ಯಾಗು, ಎಡಗೈಯ್ಯಲ್ಲಿ, ಬಲಗೈಯ್ಯಲ್ಲಿ ಭಾರಿ